# ಹೊಸ ತಲೆಮಾರಿನ ಬರಹಗಾರರ ತಲ್ಲಣಗಳು

ರಾಗಿಣಿ ಮಹಾವೀರ ಶಿರಗಾರ

ಕನ್ನಡ ಉಪನ್ಯಾಸಕರು, ಬಣಜವಾಡ ಕಾಲೇಜು, ಅಥಣಿ.

DOI: https://doi.org/10.5281/zenodo.17257694

## ABSTRACT:

ಬರಹವು ಬರಹಗಾರನ ಆಲೋಚನೆ, ಭಾವನೆ, ಅನುಭವ, ಜ್ಞಾನ ಮತ್ತು ಕಲ್ಪನೆಗಳನ್ನು ಅಕ್ಷರಗಳ ಮೂಲಕ ದಾಖಲಿಸುವ ಪ್ರಕ್ರಿಯೆಯಾಗಿದ್ದು, ಪ್ರತಿಯೊಂದು ಯುಗದಲ್ಲಿಯೂ ಸಾಹಿತ್ಯವು ಸಮಾಜದ ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಜೀವನದ ಪ್ರತಿಬಿಂಬವಾಗಿದೆ. ಇಂದಿನ ಜಾಗತೀಕರಣ, ತಂತ್ರಜ್ಞಾನ, ಹೊಸ ಮೌಲ್ಯಗಳು, ಸಾಮಾಜಿಕ ಬದಲಾವಣೆ ಹಾಗೂ ಬದುಕಿನ ಒತ್ತಡಗಳು ಹೊಸ ತಲೆಮಾರಿನ ಬರಹಗಾರರಿಗೆ ಹಲವು ತಲ್ಲಣಗಳನ್ನು ಉಂಟುಮಾಡಿವೆ. ಏನು ಬರೆಯಬೇಕು? ಯಾರಿಗಾಗಿ ಬರೆಯಬೇಕು? ಯಾವ ಭಾಷೆಯಲ್ಲಿ ಬರೆಯಬೇಕು? ಪುಸ್ತಕ ರೂಪದಲ್ಲಾ ಅಥವಾ ಡಿಜಿಟಲ್ ವೇದಿಕೆಯಲ್ಲಿ ಬರೆಯಬೇಕಾ? ಎಂಬ ಪ್ರಶ್ನೆಗಳು ಇವರ ಮುಂದೆ ನಿಂತಿವೆ. ಕೃತಕ ಬುದ್ಧಿಮತ್ತೆ, ಡಿಜಿಟಲ್ ಜಗತ್ತು, ಮಾರುಕಟ್ಟೆ ಧೋರಣೆಗಳು, ಭಾಷಾಸಾಮಾಜಿಕ ಅಸಮಾನತೆಗಳು, ಪ್ರಶಸ್ತಿಗಳ ರಾಜಕೀಯ – ಇವುಗಳೆಲ್ಲ ಬರಹಗಾರರಲ್ಲಿ ಗೊಂದಲವನ್ನು ಸೃಷ್ಟಿಸುತ್ತವೆ. ಆದರೂ ಈ ತಲ್ಲಣಗಳೇ ಸೃಜನಶೀಲತೆಗೆ ಚಿಲುಮೆಗಳಾಗಿ ಹೊಸ ಸಾಹಿತ್ಯ ಪರಂಪರೆಯನ್ನು ರೂಪಿಸುತ್ತಿವೆ. ಇಂದಿನ ಬರಹಗಾರರು ಲಿಂಗಸಮಾನತೆ, ಮಾನವ ಹಕ್ಕುಗಳು, ಪರಿಸರ ಸಂರಕ್ಷಣೆ, ಮಾನಸಿಕ ಆರೋಗ್ಯ, ಜಾಗತೀಕರಣ ಮುಂತಾದ ಪ್ರಸ್ತುತ ವಿಷಯಾಧಾರಿತ ಸಾಹಿತ್ಯವನ್ನು ಸೃಷ್ಟಿಸುತ್ತಿದ್ದು, ಕನ್ನಡ ಸಾಹಿತ್ಯಕ್ಕೆ ಹೊಸ ದಿಕ್ಕನ್ನು ತೋರಿಸುತ್ತಿದ್ದಾರೆ. ಹೀಗಾಗಿ, ಹೊಸ ತಲೆಮಾರಿನ ಬರಹಗಾರರ ತಲ್ಲಣಗಳು ಸಾಹಿತ್ಯದ ಸ್ಥಗಿತವಲ್ಲ; ಅದು ಸಾಹಿತ್ಯ ಸೃಷ್ಟಿಯ ಹೊಸ ಮಾರ್ಗದ ಸೂಚನೆಯಾಗಿದೆ.

## KEYWORDS:

ಕನ್ನಡ ಸಾಹಿತ್ಯ, ಜಾಗತೀಕರಣ, ಡಿಜಿಟಲ್ ವೇದಿಕೆ, ಸಾಮಾಜಿಕ ಬದಲಾವಣೆ, ಸಾಹಿತ್ಯ ತಲ್ಲಣಗಳು, ಸೃಜನಶೀಲತೆ, ಆಧುನಿಕ ವಿಷಯಗಳು.

ಬರಹಗಾರನ ಆಲೋಚನೆ, ಭಾವನೆ, ಅನುಭವ, ಜ್ಞಾನ ಮತ್ತು ಕಲ್ಪನೆಗಳನ್ನು ಲಿಖಿತ ರೂಪದಲ್ಲಿ ದಾಖಲಿಸುವ ಪ್ರಕ್ರಿಯೆಯೇ ಬರವಣಿಗೆ. ಇಲ್ಲಿ ಬರವಣಿಗೆಯ ಮೂಲವಾದ ಅಕ್ಷರ, ಅಕ್ಷರಗಳಿಂದ ನಿರ್ಮಿತವಾದ ಪದಗಳು, ಪದಗಳಿಂದ ಅರ್ಥ ಪಡೆದುಕೊಳ್ಳುವ ವಾಕ್ಯಗಳು, ಬರಹಗಾರನ ವೈಯಕ್ತಿಕ ಅಭಿವ್ಯಕ್ತಿಯ ಶೈಲಿ, ವಸ್ತು, ವಿಷಯ, ತಂತ್ರ, ಭಾಷೆ, ಸಾಹಿತ್ಯಿಕ ಬರವಣಿಗೆಯ ಪ್ರಕಾರ ಇವೆಲ್ಲವೂ ಬರವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

ಯಾಕೆ ಹೊಸ ಹೊಸ ಬರವಣಿಗೆಗಳು ಮತ್ತೆ ಮತ್ತೆ ಸಾಹಿತ್ಯ ಲೋಕದಲ್ಲಿ ರಚನೆಯಾಗುತ್ತಲೇ ಇರಬೇಕೆಂದರೆ ಇವು ಜ್ಞಾನವನ್ನು ಉಳಿಸುವ ಸಾಧನಗಳಾಗಿವೆ. ಮುಂದಿನ ಪೀಳಿಗೆಗೆ ಈ ಹಿಂದಿನ ಸಂದೇಶ ಸಾಗಿಸುವ ಮಾರ್ಗವಾಗಿವೆ. ಸಮಾಜದ ಸಂಸ್ಕೃತಿ, ಇತಿಹಾಸ ಸಂಪ್ರದಾಯಗಳನ್ನು ಉಳಿಸುವ ಶಕ್ತಿಗಳಾಗಿವೆ. ಸುತ್ತ ಮುತ್ತಲಿನ ಸಂಗತಿಗಳನ್ನು, ಸೂಕ್ಷ್ಮಾಂಶಗಳನ್ನು ಅರಿಯುವ ಬಹುಮುಖ್ಯ ರಹದಾರಿಗಳಾಗಿವೆ. ಯಾವುದೇ ಒಬ್ಬ ಬರಹಗಾರನ ಬರವಣಿಗೆ ಆ ಸಮಾಜದ ಕನ್ನಡಿಯಾಗಿ ಪ್ರತಿಬಿಂಬಿತವಾಗಿರುತ್ತದೆ. ಆಯಾ ಕಾಲಘಟ್ಟದ ಸನ್ನಿವೇಶಗಳ ಪ್ರಸ್ತುತಿಯಾಗಿರುತ್ತದೆ. ಕನ್ನಡ ಸಾಹಿತ್ಯದಲ್ಲಿ ಗಮನಿಸಿದಾಗ ಪ್ರಾಚೀನ ಸಾಹಿತ್ಯದಿಂದಿಡಿದು ಇಂದಿನ ಆಧುನಿಕ ಸಾಹಿತ್ಯಿಕ ಕೃತಿಗಳನ್ನು ಗಮನಿಸಿದಾಗ ಈ ಸಂಗತಿಯು ಮನದಟ್ಟಾಗುತ್ತದೆ. ಆ ಸಾಹಿತ್ಯ ಆಯಾ ಕಾಲಘಟ್ಟದ ಅವಶ್ಯಕತೆಗನುಗುಣವಾಗಿ ರಚಿತವಾಗಿರುತ್ತದೆ. ಆದರೆ ಈಗ ತುಂಬಾ ಸಂಕೀರ್ಣತೆಯಿಂದ ಕೂಡಿದ ಸಮಾಜವಿದೆ. ಇಂದಿನ ತಲೆಮಾರು ತಂತ್ರಜ್ಞಾನ, ಜಾಗತೀಕರಣ, ಸಾಮಾಜಿಕ ಬದಲಾವಣೆ, ಹೊಸ ಮೌಲ್ಯಗಳು ಮತ್ತು ವೈವಿಧ್ಯಮಯ ಬದುಕಿನ ಒತ್ತಡಗಳ ನಡುವೆ ಬದುಕುತ್ತಿದ್ದಾರೆ. ಈ ಮೇಲಿನ ಎಲ್ಲ ಪ್ರಭಾವಗಳು ಹೊಸ ತಲೆಮಾರಿನ ಬರಹಗಾರರಿಗೆ ತಲ್ಲಣಗಳನ್ನು ರೂಪಿಸುತ್ತಿವೆ.

**ಹೊಸ ತಲೆಮಾರಿನ ಬರಹಗಾರರ ತಲ್ಲಣಗಳು:**

**ಬರವಣಿಗೆಯನ್ನು ಹೇಗೆ ಆರಂಭಿಸಬೇಕು?**

ಸಾಹಿತ್ಯದ ಮುಖ್ಯ ಗುರಿ ರಸ. ಅದನ್ನು ಸಹೃದಯರಿಗೆ ತಲುಪಿಸುವುದೇ ಬರಹಗಾರನ ಕೆಲಸ. ಸಾಮಾನ್ಯವಾಗಿ ಪ್ರತಿ ವ್ಯಕ್ತಿಯು ತನ್ನದೇ ಆದ ವಿಚಾರ ಶಕ್ತಿಯನ್ನು ಹೊಂದಿರುತ್ತಾನೆ. ಹೊಸ ಹೊಸ ಸಂಗತಿಗಳ ಕುರಿತು ಆಲೋಚನೆ ಮಾಡುತ್ತಾನೆ. ಆದರೆ ಅದನ್ನು ಇತರರೊಂದಿಗೆ ಹಂಚಿಕೊಳ್ಳಲು ಅಥವಾ ಬರವಣಿಗೆಯ ರೂಪಕ್ಕಿಳಿಸಲು ಹಿಂಜರಿಯುತ್ತಾನೆ. ಅದಕ್ಕೆ ಹಲವಾರು ಕಾರಣಗಳು ಕೂಡಾ ಇವೆ. ಇಂದಿನ ಯುವ ಪೀಳಿಗೆ ತಮ್ಮನ್ನು ತಾವು ವಾಟ್ಸಾಪ್, ಫೆಸ್‌ಬುಕ್, ಗೂಗಲ್, ಎ.ಐ. ಅಥವಾ ಕೃತಕ ಬುದ್ಧಿಮತ್ತೆಗಳಿಂದ ಜ್ಞಾನವನ್ನು ಗಳಿಸುತ್ತಿರಬೇಕಾದರೆ ನಮ್ಮ ಬರಹದ ಪುಸ್ತಕಗಳನ್ನು ಯಾರು ಓದುತ್ತಾರೆ ಎಂಬ ಹಿಂಜರಿಕೆಯನ್ನು ಇಂದಿನ

ಯುವ ಬರಹಗಾರರು ಎದುರಿಸುತ್ತಿದ್ದಾರೆ.

ಸಾಮಾನ್ಯವಾಗಿ ನೋಡುವುದಾದರೆ ಕನ್ನಡ ಸಾಹಿತ್ಯ ಪ್ರತಿ ಕಾಲಘಟ್ಟದಲ್ಲೂ ಹೊಸ ವಸ್ತುವಿನೊಂದಿಗೆ ಸಾಹಿತ್ಯ ರಚನೆಗೊಂಡಿರುವುದನ್ನು ಗಮನಿಸಬಹುದು. ನವೋದಯದಲ್ಲಿ ರಾಷ್ಟ್ರೀಯತೆ, ಸ್ವಾತಂತ್ರ್ಯ, ಹೋರಾಟ, ಸಮಾಜ ಸುಧಾರಣೆ, ಪ್ರಕೃತಿ, ದೇವರು ಇಂತಹ ವಿಷಯಗಳು ಸಾಹಿತ್ಯ ರಚನೆಯ ವಸ್ತುವಾಗಿದ್ದರೆ, ಶೋಷಣೆ, ಸಮಾನತೆ, ರೈತರ ಬದುಕು ಇವು ಪ್ರಗತಿವಾದಿಗಳ ವಸ್ತುಗಳಾಗಿದ್ದವು. ಅಸ್ತಿತ್ವ, ವ್ಯಕ್ತಿಯಲ್ಲಿನ ದ್ವಂದ್ವ ಇವು ನವ್ಯದ ಸಾಹಿತ್ಯ ರಚನೆಯ ವಸ್ತುಗಳಾಗಿದ್ದವು. ಸಮಾನತೆಗಾಗಿ ಹೋರಾಟ, ತಮ್ಮ ಹಕ್ಕುಗಳಿಗಾಗಿ ಹೋರಾಟ, ದಬ್ಬಾಳಿಕೆ ವಿರೋಧ ಇವೆಲ್ಲಾ ದಲಿತ ಮತ್ತು ಬಂಡಾಯ ಸಾಹಿತ್ಯ ರಚನಾ ವಿಷಯಗಳಾಗಿದ್ದವು. ಆದರೆ ಇಂದಿನ ಯುವ ಬರಹಗಾರರಿಗೆ ನವಯುಗದ ಬದುಕಿನ ಸಂಕೀರ್ಣತೆಯೊಂದಿಗೆ ಯಾವ ವಸ್ತುವನ್ನು ಬರವಣಿಗೆಯ ವಿಷಯವಾಗಿ ಬಳಸಬೇಕು ಎಂಬುದೇ ಬಹುದೊಡ್ಡ ಸವಾಲಾಗಿದೆ.

ಮೊಬೈಲ್, ಇಂಟರ್‌ನೆಟ್, ಗೂಗಲ್, ಕೃತಕಬುದ್ಧಿಮತ್ತೆಯಲ್ಲಿಯೇ ಯಾವುದೇ ಪ್ರಯಾಸವಿಲ್ಲದೆ ಅತೀ ಕಡಿಮೆ ಸಮಯದಲ್ಲಿ ಎಲ್ಲ ಮಾಹಿತಿಗಳು, ಬರವಣಿಗೆಗಳು ತುಂಬಾ ಸರಳವಾಗಿ ಸಿಗುತ್ತಿರಬೇಕಾದರೆ ನಾನು ಯಾಕೆ ಬರೆಯಬೇಕು? ಎಂಬ ಸವಾಲನ್ನು ಇಂದಿನ ಬರಹಗಾರರು ಎದುರಿಸುತ್ತಿದ್ದಾರೆ.

ಜಾಗತೀಕರಣ, ವಿದೇಶಿ ಸಂಸ್ಕೃತಿಯ ಪ್ರಭಾವ ಕೂಡಾ ಇಂದಿನ ಬರಹಗಾರರಿಗೆ ಪ್ರಮುಖ ಸವಾಲಾಗಿದೆ. 'ಎಸ್. ಎಲ್. ಭೈರಪ್ಪ ಅವರು ತಮ್ಮ ಆತ್ಮಕತೆ 'ಭಿತ್ತಿ'ಯಲ್ಲಿ ಹೇಳಿರುವಂತೆ ತಾವು ಕತೆಗಾರ ಆನಂದರನ್ನು ಭೇಟಿ ಮಾಡುತ್ತಿದ್ದಾಗ ಅವರೊಂದಿಗೆ ಸಾಹಿತ್ಯದ ವಿಷಯ ಚರ್ಚಿಸುತ್ತಿದ್ದರು. ಒಂದು ದಿನ ಎಸ್. ಎಲ್. ಭೈರಪ್ಪ ಅವರ ಹಾಸ್ಟೆಲಿಗೆ ಬಂದ ಆನಂದರು ಅಲ್ಲಿದ್ದ ಪುಸ್ತಕಗಳನ್ನು ನೋಡಿ ಹೇಳಿದರು. 'ಇಂಥ ಪುಸ್ತಕಗಳನ್ನು ಓದಬಾರದು, ಓದುಗರನ್ನು ರಂಜಿಸಿ, ಕಾಸು ಮಾಡುವುದಕ್ಕಾಗಿ ಇಂಗ್ಲಿಷ್ ದೇಶಗಳಲ್ಲಿ ನೂರಾರು ಲೇಖಕರು ಬರೀತಿರ್ತಾರೆ. ನಾವು ಯಾವುದನ್ನು ಮೆಚ್ಚಿ ಓದುತ್ತೇವೆಯೋ ಅಂಥದ್ದನ್ನೇ ಬರೆಯಬೇಕು ಅಂತ ಮನಸ್ಸಿನಲ್ಲಿ ಬಯಕೆ ಶುರುವಾಗುತ್ತೆ. ಆದ್ದರಿಂದ ಕ್ಲಾಸಿಕ್ ಅಂತ ಪರಿಗಣಿತವಾಗಿರುವ ಪುಸ್ತಕಗಳನ್ನು ಮಾತ್ರ ಓದಬೇಕು. ಬಿಡುವಿದ್ದರೆ ಪಾರ್ಕಿನಲ್ಲಿ ಕೂತು ಕಡಲೆಕಾಯಿ ತಿನ್ನಿ. ಆದರೆ ಇಂಥ ಚಿಲ್ಲರೆ ಪುಸ್ತಕ ಓದಬೇಡಿ ಎಂದು ಆನಂದರೇ ತಮ್ಮ ಸ್ವಂತ ಪುಸ್ತಕಗಳನ್ನು ಕೊಟ್ಟು ಮೊಪಾಸಾ, ಓ ಹೆನ್ರಿ, ಟುರ್ಗೆನೇವ್, ಟಾಲ್‌ಸ್ಟಾಯ್ ಇವರ ಸಣ್ಣ ಕಥೆಗಳನ್ನು ಓದಿಸಿದರು.'' ಎಂದು ಬರೆದುಕೊಂಡಿದ್ದಾರೆ'1. ಈ ಸಂಗತಿ ಗಮನಿಸಿದಾಗ ಈಗಾಗಲೇ ಬಹುದೊಡ್ಡ ಬರಹಗಾರರು ಎಂದು ಗುರುತಿಸಿಕೊಂಡಿರುವವರ ಕೃತಿಗಳು ಮಾತ್ರ

ಓದಲು ಅರ್ಹ ಎಂಬ ಸಂಗತಿ ಸಾಬೀತಾಗುತ್ತದೆ. ಹೀಗಾಗಿ ಹೊಸ ಬರಹಗಾರರಿಗೆ ಕಡಿಮೆ ಪ್ರೋತ್ಸಾಹ ಸಿಗುವುದರಿಂದ ಕೂಡಾ ಹೊಸ ಬರಹಗಾರರು ಬರೆಯಲು ನಿರುತ್ಸಾಹಿಗಳಾಗುತ್ತಿದ್ದಾರೆ.

ಬದುಕಲು ಉದ್ಯೋಗ ಅತ್ಯವಶ್ಯಕವಾಗಿದೆ. ಕೇವಲ ಸಾಹಿತ್ಯ ಬರವಣಿಗೆಯಿಂದ ಗಳಿಕೆ ಅಸಾಧ್ಯ. ಇದನ್ನು ನಂಬಿ ಕುಳಿತರೆ ಹೊಟ್ಟೆ ಹೊರೆಯಲು ಅಸಾಧ್ಯ. ಹೀಗಾಗಿ ಬರವಣಿಗೆ ಕ್ಷೇತ್ರದಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕೆ? ಎಂಬ ಸವಾಲನ್ನು ಇಂದಿನ ಯುವ ಜನತೆ ಹೊಂದಿದ್ದಾರೆ. ಸಾಹಿತಿಗಳಾಗಿ ತಮ್ಮನ್ನು ತಾವು ಗುರುತಿಸಿಕೊಳ್ಳಲು ಸಹ ಇಷ್ಟಪಡದವರಿದ್ದಾರೆ.

ಸಾಮಾಜಿಕ ಅಸಮಾನತೆ ಮತ್ತು ಲಿಂಗ ಅಸಮಾನತೆ ಅಂಶ ಕೂಡಾ ಬರಹಗಾರರ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಬೀರುತ್ತಿವೆ. ಬರಹಗಾರನ ಬರವಣಿಗೆಯನ್ನು ಪ್ರಧಾನವಾಗಿ ನೋಡದೆ ಆತನ ಸಾಮಾಜಿಕ ಹಿನ್ನಲೆ, ಜಾತಿ, ಮತ, ಪಂಗಡ, ಲಿಂಗ ಹೀಗೆ ಹಲವು ದೃಷ್ಟಿಯಿಂದ ಬರಹಗಾರನ ಕೃತಿಗಳು ಮುಂಚೂನಿಗೆ ಬರದೆ ಮರೆಯಾಗಿ ಉಳಿಯುತ್ತವೆ. ಇದು ಕೂಡಾ ಯುವ ಬರಹಗಾರರ ಮೇಲೆ ನಕಾರಾತ್ಮಕ ಪರಿಣಾಮ ಬೀರುವ ಅಂಶವಾಗಿದೆ.

ಸರ್ಕಾರ, ಟ್ರಸ್ಟ್, ದತ್ತಿ, ಇಲಾಖೆಗಳು, ಅಕಾಡೆಮಿಗಳು ಕೆಲವು ಪ್ರಶಸ್ತಿಗಳನ್ನು ನಿಷ್ಪಕ್ಷಪಾತವಾಗಿ ನೀಡದೆ ತಮ್ಮ ಸಂಬಂಧಿಕರಿಗೆ ಅಥವಾ ರಾಜಕೀಯ ಪ್ರಭಾವ, ಧನ ಬಲ ಹೀಗೆ ಹಲವು ಪ್ರಭಾವಗಳು ಕೂಡಾ ಯುವ ಬರಹಗಾರರಿಗೆ ಬರವಣಿಗೆಯಲ್ಲಿನ ಆಸಕ್ತಿಯನ್ನು ಕಡಿಮೆಗೊಳಿಸುತ್ತಿದೆ.

ಬರಹಗಾರರು ತಮ್ಮೊಳಗೆ ಹಲವು ದ್ವಂದ್ವಗಳನ್ನು ಎದುರಿಸುತ್ತಿದ್ದಾರೆ. ಯಾರಿಗಾಗಿ ಬರೆಯಬೇಕು? ಏನನ್ನು ಬರೆಯಬೇಕು? ಹೇಗೆ ಬರೆಯಬೇಕು? ಯಾವ ಶೈಲಿಯಲ್ಲಿ ಬರೆಯಬೇಕು? ನನ್ನ ಭಾವನೆಗಳನ್ನು ಬರೆಯಬೇಕೇ ಅಥವಾ ಸಮಾಜಕ್ಕಾಗಿ ಬರೆಯಬೇಕು? ಅವರ ಬರವಣಿಗೆಗೆ ಓದುಗರಿದ್ದಾರೆಯೇ ಎಂಬ ಆತಂಕ? ತನ್ನ ಗೊಂದಲ, ಅನುಭವ, ಭಾವನೆ ಇವು ಸಮಾಜದ ನಿರೀಕ್ಷೆಗಳನ್ನು ಈಡೇರಿಸಲು ಸಾಧ್ಯವೇ? ತನ್ನ ಬರವಣಿಗೆ ಸಮಾಜಕ್ಕೆ ಉಪಯುಕ್ತ ಮಾಹಿತಿ ನೀಡುತ್ತಿದೆಯೇ? ತನ್ನ ಬರವಣಿಗೆಯಲ್ಲಿ ಏನಾದರೂ ತಪ್ಪು ತಡೆಗಳಿರಬಹುದೇ? ನನ್ನ ಬರವಣಿಗೆಯನ್ನು ಜನರು ಒಪ್ಪಿಕೊಳ್ಳುವರೇ? ಈಗಾಗಲೇ ಬಹುದೊಡ್ಡ ಸಾಹಿತ್ಯ ಪರಂಪರೆ ಇದ್ದು, ಉದಾಹರಣೆಗೆ ಕನ್ನಡ ಸಾಹಿತ್ಯ ಅಂತಾ ಬಂದಾಗ ಪಂಪ, ಪೊನ್ನ, ರನ್ನ, ಕುವೆಂಪು, ಬೇಂದ್ರೆ, ತೇಜಸ್ವಿ, ದೇವನೂರು ಮಹಾದೇವ, ಯು. ಆರ್. ಅನಂತಮೂರ್ತಿ ಅಂತಹ ಸಾಹಿತಿಗಳು ರಚಿಸಿದ ಮಹಾನ್ ಸಾಹಿತ್ಯ ಪರಂಪರೆ ಇದ್ದು ಹೊಸ ಬರಹಗಾರರಿಗೆ ತಾವು ಈ ಹಿಂದಿನ ಸಾಹಿತ್ಯಿಕ ಪರಂಪರೆಯ

ಗೌರವವನ್ನು ಉಳಿಸಿಕೊಂಡು ಹೊಸ ಕಾಳಜಿಗಳನ್ನು ಹೇಗೆ ಹೇಳಬೇಕು ಎಂಬ ಪ್ರಶ್ನೆಯೇ ದೊಡ್ಡ ತಲ್ಲಣ ಇಂದಿನ ಯುವ ಬರಹಗಾರರ ಮುಂದಿದೆ.

ತಂತ್ರಜ್ಞಾನ ಮತ್ತು ಸಾಹಿತ್ಯ ಸಂಬಂಧ ನೋಡುವುದಾದರೆ 'ಇಂದಿನ ಬರಹಗಾರರು ಮುದ್ರಿತ ಪುಸ್ತಕ ಮತ್ತು ಡಿಜಿಟಲ್ ವೇದಿಕೆ (ಬ್ಲಾಗ್, ವಾಟ್ಸಪ್ ಸಾಹಿತ್ಯ, ಕೃತಕ ಬುದ್ಧಿಮತ್ತೆ, ಇಪುಸ್ತಕಗಳು, ಆನ್‌ಲೈನ್ ಜರ್ನಲ್‌ಗಳು, ಸಾಮಾಜಿಕ ಜಾಲತಾಣ) ಇವುಗಳ ಮುಂದೆ ತಾವು ಪುಸ್ತಕ ರೂಪಗಳಲ್ಲಿ ಬರೆಯಬೇಕೆ ಅಥವಾ ಡಿಜಿಟಲ್ ವೇದಿಕೆಯಲ್ಲಿ ಬರೆಯಬೇಕೆ ಎಂಬ ದ್ವಂದ್ವದಲ್ಲಿ ಬದುಕುತ್ತಿದ್ದಾರೆ'.

ಕೆಲ ಯುವ ಬರಹಗಾರರಲ್ಲಿನ ಗಟ್ಟಿ, ಅರ್ಥಪೂರ್ಣ ಬರವಣಿಗೆಯ ಕೊರತೆ, ಹಿರಿಯ ತಲೆಗಳನ್ನು ಒಪ್ಪಿಸಲು ಅಸಾಧ್ಯ, ಓದುಗರ ಕೊರತೆ, ಹೊಸ ತಲೆಮಾರು ಮತ್ತು ಹಳೆ ತಲೆಮಾರು ಬರಹಗಾರರೊಂದಿಗೆ ಶೀತಲ ಸಮರ, ಇಂದಿನ ಬರಹಗಾರರು ಲಿಂಗಸಮಾನತೆ, ದಲಿತ ಹಕ್ಕುಗಳು,

ಪರಿಸರ ಕಾಳಜಿ, ಮಾನವ ಹಕ್ಕುಗಳು ಮುಂತಾದ ವಿಷಯಗಳನ್ನು ಬರೆಯುತ್ತಿದ್ದಾರೆ. ಆದರೆ ಸಂಪ್ರದಾಯಬದ್ಧ ವಾಚಕರಿಂದ ಟೀಕೆ ಬರಬಹುದೆಂದು ಬರಹಗಾರರು ನಿರಾಸಕ್ತರಾಗಿದ್ದಾರೆ.

ಮಾರುಕಟ್ಟೆಯಲ್ಲಿ ಹೆಚ್ಚು ಮಾರಾಟವಾಗುವಂತಹ ವಿಷಯಾಧಾರಿತವಾಗಿ ಬರೆಯಬೇಕೆಂಬ ಹಂಬಲ, ಪುಸ್ತಕ ಮಾರಾಟ, ಪ್ರಕಾಶಕರ ಬಲ, ದೌರ್ಬಲ್ಯ, ಪ್ರಶಸ್ತಿಗಳ ರಾಜಕೀಯ ಮುಂತಾದ ಕಾರಣಗಳಿಂದ ಬರಹಗಾರರು ತಮ್ಮ ಸೃಜನಶೀಲತೆಯನ್ನು ಮಾರಾಟದ ತಂತ್ರಗಳಿಗೆ ಹೊಂದಿಸಿಕೊಳ್ಳಬೇಕಾಗುತ್ತದೆ.

ಯಾವ ಭಾಷೆಯಲ್ಲಿ ಬರೆಯಬೇಕೆಂಬ ಗೊಂದಲವನ್ನು ಕೂಡಾ ಯುವ ಬರಹಗಾರರು ಎದುರಿಸುತ್ತಿದ್ದಾರೆ. ತಮ್ಮ ಮಾತೃ ಭಾಷೆಯಲ್ಲಿ ಬರೆಯಬೇಕೆ ಅಥವಾ ಇಂಗ್ಲಿಷಿನಲ್ಲಿ ಬರೆಯುವುದರಿಂದ ಹೆಚ್ಚಿನ ಓದುಗರನ್ನು ತಲುಪಬಹುದೆಂಬ ಕಾರಣಕ್ಕಾಗಿ ಆಂಗ್ಲ ಭಾಷೆಯಲ್ಲಿಯೇ ಅತಿ ಹೆಚ್ಚು ಸಾಹಿತ್ಯ ಸೃಷ್ಟಿಯಾಗುತ್ತಿರುವುದರಿಂದ ಪ್ರಾದೇಶಿಕ ಭಾಷಾ ಲೇಖಕರು ಕೀಳರಿಮೆಯಿಂದ ಹೊಸ ಬರಹಗಾರರಾಗಲು ನಿರಾಸಕ್ತಿ ಹೊಂದಬಹುದು. ಕೆಲವು ಬರಹಗಾರರಿಗೆ ಕುಟುಂಬ, ಸಮಾಜ, ರಾಜಕೀಯ, ಧಾರ್ಮಿಕ ಒತ್ತಡಗಳಿವೆ. ಕೆಲವು ಕೃತಿಗಳನ್ನು ಬೇಕಂತಲೇ ನಿರ್ಲಕ್ಷಿಸುತ್ತಾರೆ. ಇದು ಕೂಡಾ ಇಂದಿನ ಯುವ ಬರಹಗಾರರು ಎದುರಿಸುತ್ತಿರುವ ಬಹುದೊಡ್ಡ ತಲ್ಲಣವಾಗಿದೆ.

ಹೀಗೆ ಹಲವು ದ್ವಂದ್ವದಲ್ಲಿ ಯುವ ಬರಹಗಾರರಿದ್ದಾರೆ. ಇಂದಿನ ಬರಹಗಾರರಲ್ಲಿ ಸೃಜನಶೀಲತೆಯ ಕೊರತೆ ಇರುವುದನ್ನು ಗಮನಿಸಬಹುದು.

ಹಾಗಂತ ಯುವ ಬರಹಗಾರರ ಸಾಹಿತ್ಯ ಸೃಷ್ಟಿಯೇನು ಕಡಿಮೆ ಇಲ್ಲ. ಹಲವಾರು ಯುವ ಬರಹಗಾರರು ಸಾಹಿತ್ಯ ರಚನೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಸುಬ್ರಹ್ಮಣ್ಯ ಸಿ. ಅಜೇಯ ಪಿ.ಎಸ್, ಶೃತಿ ಬಿ.ಆರ್, ಡಾ. ರಂಜಿನಿ ರಾಘವನ್, ದಾದಾಪೀರ್ ಹೀಗೆ ಹಲವಾರು ಯುವ ಬರಹಗಾರರು ಕನ್ನಡ ಸಾಹಿತ್ಯದಲ್ಲಿ ಕೃಷಿ ಮಾಡುತ್ತಿರುವುದನ್ನು ಕಾಣಬಹುದು.

ಹೊಸ ಬರಹಗಾರರ ಕುರಿತು ಕೆಲವು ಸಂಶೋಧಕರ ಅಭಿಪ್ರಾಯಗಳನ್ನು ಗಮನಿಸಬಹುದು. 'ಹೊಸ ಬರಹಗಾರರ ತಲ್ಲಣಗಳು ಸಾಹಿತ್ಯದ ಸ್ಥಗಿತವಲ್ಲ, ಅದು ಹೊಸ ದಿಕ್ಕಿನ ಸೂಚನೆ' ಎಂದು ಕೆ.ವಿ. ತಿರುಕಣ್ಣಪ್ಪ ಅಭಿಪ್ರಾಯ ತಿಳಿಸಿದರೆ, 'ಬರಹಗಾರನು ಸದಾ ಅಸಮಾಧಾನಿಯೇ ಆಗಿರಬೇಕು, ಅಸಮಾಧಾನವೇ ಅವನ ತಲ್ಲಣ, ಅದು ಸಾಹಿತ್ಯಕ್ಕೆ ಜೀವ ತುಂಬುತ್ತದೆ'. ಎಂದು ಕನ್ನಡದ ಹೆಸರಾಂತ ಸಾಹಿತಿಗಳಾದ ದೇವನೂರು ಮಹಾದೇವ ಅವರ ಮಾತನ್ನಿಲ್ಲಿ ಗಮನಿಸಬಹುದು.

ಹೊಸ ತಲೆಮಾರಿನ ಬರಹಗಾರರು ಈ ಹಿಂದಿನ ಸಾಹಿತ್ಯ ರಚನೆಗಿಂತ ತೀರಾ ವಿಭಿನ್ನವಾದ ಸಾಹಿತ್ಯ ರಚನೆ ಮಾಡುತ್ತಿದ್ದಾರೆ. ಉದಾಹರಣೆಗೆ ಇಂದಿನ ಯುವಪೀಳಿಗೆ ಎದುರಿಸುತ್ತಿರುವ ಸವಾಲುಗಳಾದ ಮಾನಸಿಕ ಆರೋಗ್ಯ ಮತ್ತು ಒತ್ತಡ, ನಿರುದ್ಯೋಗ ಹಾಗೂ ಯುವಕರ ಕನಸುಗಳು, ನಗರೀಕರಣ, ಹವಾಮಾನ, ಪರಿಸರ ಸಂರಕ್ಷಣೆ, ಲಿಂಗ ಸಮಾನತೆ, ತಂತ್ರಜ್ಞಾನ ಸಂಬಂಧಿ ಬರಹಗಳು, ವಿಜ್ಞಾನಕ್ಕೆ ಸಂಬಂಧಿಸಿದ ಬರಹಗಳು, ವೈಚಾರಿಕ ಲೇಖನಗಳು, ಸಂಶೋಧನಾ ಪ್ರಬಂಧಗಳು ಹೀಗೆ ಪ್ರಸ್ತುತ ಸಮಾಜದ ಬೇಡಿಕೆಗನುಗುಣವಾಗಿ ಸಾಹಿತ್ಯ ಸೃಷ್ಟಿ ಮಾಡುತ್ತಿದ್ದಾರೆ.

ಇಷ್ಟೆಲ್ಲಾ ಗೊಂದಲಗಳೊಂದಿಗೆ ಹೊಸ ತಲೆಮಾರಿನ ಬರಹಗಾರರು ಸಾಹಿತ್ಯ ಸೃಷ್ಟಿಸುತ್ತಿದ್ದಾರೆ. ಇವರ ತಲ್ಲಣಗಳು ಕೇವಲ ಅವರ ಗೊಂದಲ ಮಾತ್ರವಲ್ಲ. ಅವು ಸೃಜನಶೀಲತೆಯ ಚಿಲುಮೆಗಳು, ಹೊಸ ಪರಂಪರೆಯ ಮೂಲ ಬೀಜಗಳು, ಜಾಗತೀಕರಣದ ಹೊಸ ಅಲೆಗಳು, ಹೊಸ ಮೌಲ್ಯಗಳ ಬದಲಾವಣೆಯೊಂದಿಗೆ ರಚನೆಯಾಗುವ ಈ ಸಾಹಿತ್ಯ ಮುಂದಿನ ಭವಿಷ್ಯದ ಸಾಹಿತ್ಯದ ಹೊಸ ಶಕ್ತಿಯಾಗಿ ಮುಂಬರುವ ಬರಹಗಾರರಿಗೆ ಹೊಸ ಕಾಲುದಾರಿಯನ್ನು ತೋರಿಸುತ್ತವೆ. ಇಂತಹ ಯುವ ಬರಹಗಾರರಿಗೆ ಪ್ರೋತ್ಸಾಹದ ಅವಶ್ಯಕತೆ ಇದೆ.

## ಪರಾಮರ್ಶನ ಗ್ರಂಥಗಳು:


1. ಅನಂತಮೂರ್ತಿ ಯು.ಆರ್., (1965), ಸಂಸ್ಕಾರ, ಅಕ್ಷರ ಪ್ರಕಾಶನ, ಸಾಗರ.
2. ಮುಗಳಿ ರಂ.ಶ್ರೀ., (1953), ಕನ್ನಡ ಸಾಹಿತ್ಯ ಚರಿತ್ರೆ, ಗೀತಾ ಬುಕ್ ಹೌಸ್, ಮೈಸೂರು.
3. ನಿಂಗಣ್ಣ ಚಿ.ಸಿ., (2017), ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ, ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಕಲಬುರಗಿ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.